ಆ) ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಈ ಕೆರೆಯ ಸುತ್ತಮುತ್ತಲು ವಲಸೆ ಬರುವ ಪಕ್ಷಿಗಳನ್ನು ಗುರುತಿಸಿರುವುದಿಲ್ಲ.

ರಾಜ್ಯ ಪತ್ರಗಾರ ಇಲಾಖೆ ಬಗ್ಗೆ

1729 (2393) ಶ್ರೀ ಪ್ರಭಾಕರ ಬಂಗೇರ .ಕೆ. (ಬೆಳ್ತಂಗಡಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪತ್ರಾಗಾರ ಇಲಾಖೆಯು ಯಾವ ವರ್ಷದಿಂದ ಪ್ರಾರಂಭವಾಯಿತು-ಅದರ ಉದ್ದೇಶಗಳೇನು;

ಆ) ಇಲಾಖೆಗೆ ಇದುವರೆವಿಗೆ ಮಂಜೂರಾದ ವಿವಿಧ ಹುದ್ದೆಗಳ ವಿವರಗಳೇನು; (ವೃಂದವಾರು ವಿವರ ಒದಗಿಸುವುದು)

ಇ) ಸೂಕ್ಷ್ಮ ಚಿತ್ರೀಕರಣ ವ್ಯವಸ್ಥೆಯಿಂದ ಇದುವರೆಗೆ ಸಾಧಿಸಲಾದ ಕಾರ್ಯ ವಿವರಗಳೇನು; ಈ ಕಾರ್ಯಕ್ಕಾಗಿ ಮಾಡಿದ ವೆಚ್ಚಗಳೆಷ್ಟು (ಐದು ವರ್ಷಗಳ ವಿವರ ನೀಡಿ);

ಈ) ಇಲಾಖೆಯ ಸುಧಾರಣೆಗೆ ಸಂಬಂಧ ಪಟ್ಟಂತೆ ಡಿಪಿಎಆರ್ ಇಲಾಖೆಯವರು ನಡೆಸಿದ ತಪಾಸಣಾ ವರದಿ (1990) ಯನ್ನು ಅನುಷ್ಠಾನಗೊಳಿಸಲಾಗಿದೆಯೇ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).

ಅ) ಕರ್ನಾಟಕ ರಾಜ್ಯ ಪತ್ರಾಗಾರ ನಿರ್ದೇಶನಾಲಯವು ಡಿಸೆಂಬರ್ 1973 ರಲ್ಲಿ ಪ್ರಾರಂಭವಾಯಿತು.

ಅದರ ಉದ್ದೇಶಗಳು

1. ಕರ್ನಾಟಕ ಸರ್ಕಾರದ ಸಚಿವಾಲಯದ ಚಾಲ್ತಿಯಲ್ಲಿಲ್ಲದ ಆಡಳಿತಾತ್ಮಕವಾಗಿ ಪ್ರಮುಖವಾದ ಹಾಗೂ ಐತಿಹಾಸಿಕ ಮಹತ್ವದ ದಾಖಲೆಗಳನ್ನು ಸ್ವೀಕರಿಸಿ ವೈಜ್ಞಾನಿಕವಾಗಿ ಸಂರಕ್ಷಿಸುವುದು ಹಾಗೂ ಈ ರೀತಿ ಸಂರಕ್ಷಿಸಿದ ದಾಖಲೆಗಳನ್ನು ಸರ್ಕಾರದ ಇಲಾಖೆಗಳಿಗೆ ಸಾರ್ವಜನಿಕರಿಗೆ ಹಾಗೂ ವಿದ್ವಾಂಸರ ಬಳಕೆಗೆ ನೀಡುವುದು.

2. ಇತಿಹಾಸ ಸಂಶೋಧಕರು ಹಾಗೂ ವಿದ್ವಾಂಸರಿಗೆ ಅವರ ಸಂಶೋಧನೆಗಳಿಗೆ ಅನುಕೂಲವಾಗುವ ಖಾಸಗಿ ಒಡೆತನದಲ್ಲಿರುವ, ಅಂದರೆ, ಧಾರ್ಮಿಕ ಸಂಸ್ಥೆಗಳು, ಪ್ರಮುಖ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು,ಕೈಗಾರಿಕಾ ಸಂಸ್ಥೆಗಳು ಹಾಗೂ ಗಣ್ಯವ್ಯಕ್ತಿಗಳಿಂದ ಐತಿಹಾಸಿಕ ಮಹತ್ವಗಳುಳ್ಳ ದಾಖಲೆಗಳ ತುಲನಾತ್ಮಕ ಪರಿವೀಕ್ಷಣೆ ಮಾಡಿ, ವೈಜ್ಞಾನಿಕವಾಗಿ, ಸಂರಕ್ಷಿಸಿ ಸಂಶೋಧಕರಿಗೆ ಒದಗಿಸುವುದು.

3. ದಾಖಲೆ ಸಂರಕ್ಷಣೆ ಬಗ್ಗೆ ಸರ್ಕಾರದ ಇಲಾಖೆಗಳಿಗೆ ಬಯಸಿದ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡುವುದು ಅಲ್ಲದೆ ದಾಖಲೆ ಸಂರಕ್ಷಣೆ ಬಗ್ಗೆ ತರಬೇತಿ ನೀಡುವುದು.

ಆ) ಈ ನಿರ್ದೇಶನಾಲಯಕ್ಕೆ ಈವರೆಗೆ ಒಟ್ಟು 138 ಹುದ್ದೆಗಳು ಮಂಜೂರಾತಿಯಾಗಿದ್ದು,

ಅವುಗಳಲ್ಲಿ ಹಾಲಿ 95 ಹುದ್ದೆಗಳು ಭರ್ತಿಯಾಗಿರುತ್ತವೆ. ಹುದ್ದೆಗಳ ವಿವರ ಕೆಳಕಂಡಂತಿದೆ:

ಗ್ರೂಪ್ 'ಎ' ನಿರ್ದೇಶಕರು - 1, ಉಪ ನಿರ್ದೇಶಕರು - 2, ಪತ್ರಪಾಲಕರು-6, ಸಂರಕ್ಷಣಾ ಅಧಿಕಾರಿ-1,

ಗ್ರೂಪ್ 'ಬಿ' ಸಹ ಪತ್ರಪಾಲಕರು-14, ಗ್ರಂಥಪಾಲಕರು-1, ತಾಂತ್ರಿಕ ಅಧಿಕಾರಿಗಳು-1, ಆಡಳಿತಾಧಿಕಾರಿಗಳು-1.

ಗ್ರೂಪ್ 'ಸಿ' ಸಹಾಯಕ ತಾಂತ್ರಿಕ ಅಧಿಕಾರಿ-1, ಲೆಕ್ಕ ಅಧೀಕ್ಷಕರು-1, ಹಿರಿಯ ದಾಖಲೆ ಸಹಾಯಕರು-5, ಸಂರಕ್ಷಣಾ ಸಹಾಯಕರು-1, ಸೌಂಡ್ ರೆಕಾರ್ಡಿಸ್ಟ್-1, ಫೋರ್‌ಮೆನ್-1, ತಾಂತ್ರಿಕ ಸಹಾಯಕರು-1, ದಾಖಲೆ ಸಹಾಯಕರು-4, ಗ್ರಂಥಾಲಯ ಸಹಾಯಕರು-1, ಪ್ರಥಮದರ್ಜೆ ಸಹಾಯಕರು-7, ಶೀಘ್ರಲಿಪಿಗಾರರು-3, ಹಿರಿಯ ಬೆರಳಚ್ಚುಗಾರರು-2, ದ್ವಿ.ದ.ಸಹಾಯಕರು-13, ಬೆರಳಚ್ಚುಗಾರರು-14, ಬೈಂಡರ್-I-3, ವಾಹನ ಚಾಲಕರು-3 ಸಂರಕ್ಷಣಾ ಅಟೆಂಡರ್-1,

ಗ್ರೂಪ್ 'ಡಿ' ಬೈಂಡರ್ ಗ್ರೇಡ್-2-5, ಅಟೆಂಡರ್-13, ಜವಾನರು-26, ಸ್ವೀಕರ್-4 ಹುದ್ದೆಗಳು ಮಂಜೂರಾಗಿವೆ.

ಇ) 1. 1995 ರಿಂದ 2000ದ ಸಾಲಿನಲ್ಲಿ ಮೈಸೂರು ಗೆಜೆಟ್ ಮತ್ತು ಕೊಡಗು ಜಿಲ್ಲಾಧಿಕಾರಿಗಳ ಕಛೇರಿಯ ದಾಖಲೆಗಳನ್ನು 260 ಸೂಕ್ಷ್ಮ ಚಿತ್ರ ಸುರುಳಿಗಳಲ್ಲಿ 26,000 ಅಡಿಗಳಷ್ಟು ಉದ್ದದ ಸುರುಳಿಗಳಲ್ಲಿ ಒಟ್ಟು 2,89,500 ಪುಟಗಳಷ್ಟು ದಾಖಲೆಗಳನ್ನು ಸೂಕ್ಷ್ಮ ಚಿತ್ರೀಕರಿಸಲಾಗಿದೆ (ನೆಗೆಟಿವ್ಸ್).

2. ಹಜರತ್ ಟಿಪ್ಪುಸುಲ್ತಾನ್ ಮತ್ತು ಕೊಡಗಿನ ಜಿಲ್ಲಾಧಿಕಾರಿಗಳ ಕಛೇರಿಯ ಕೆಲವು ದಾಖಲೆಗಳನ್ನು 514 ಸೂಕ್ಷ್ಮ ಚಿತ್ರ ಸುರುಳಿಗಳಲ್ಲಿ ಸುಮಾರು 51,400 ಅಡಿಗಳಷ್ಟು ಉದ್ದದ ಮರುಪ್ರತಿ (ಪಾಸಿಟಿವ್) ಗಳನ್ನು ಮಾಡಲಾಗಿದೆ.

ಈ ಐದು ವರ್ಷಗಳಲ್ಲಿ 1995-96ನೇ ಸಾಲಿನಲ್ಲಿ ರೂ.3,126-00ನ್ನು ಮೈಕ್ರೊಫಿಲಂ ಯಂತ್ರಕ್ಕೆ ಬಲ್ಬ್ ಖರೀದಿಗೆ, 1996-97ನೇ ಸಾಲಿನಲ್ಲಿ ಸ್ಪೀಲ್ ಕ್ಯಾಮರಾ, ಮೈಕ್ರೊಫಿಲಂ ಸುರುಳಿಗಳು, ಹಾಗೂ ಕಾಟ್ರೇಜ್‌ಗಳಿಗಾಗಿ ರೂ.3,65,860-00 ನ್ನು ವೆಚ್ಚ ಮಾಡಲಾಗಿದೆ. 1997-98ನೇ ಸಾಲಿನಲ್ಲಿ ಪ್ರೊಸೆಸರ್ ಯಂತ್ರ, ಡೆವಲಪರ್ ಟೋನರ್ ಇತ್ಯಾದಿಗಳಿಗಾಗಿ ರೂ.9,64,862-00 ವೆಚ್ಚ ಮಾಡಲಾಗಿದೆ. 1998-99ನೇ ಸಾಲಿನಲ್ಲಿ ಮೈಕ್ರೊಫಿಲಂ ಡೆವಲಪರ್‌ಗಾಗಿ ರೂ.3,344-00ನ್ನು ವೆಚ್ಚ ಮಾಡಲಾಗಿದೆ. ಅಂತೆಯೇ 1999-2000ನೇ ಸಾಲಿನಲ್ಲಿ ಮೈಕ್ರೊಫಿಲಂ ಸುರುಳಿಗಳು ಹಾಗೂ ಬಲ್ಬ್‌ಗಾಗಿ ರೂ.98,000-00ನ್ನು ವೆಚ್ಚ ಮಾಡಲಾಗಿದೆ. ಒಟ್ಟಾರೆ ಐದು ವರ್ಷಗಳಲ್ಲಿ ಸೂಕ್ಷ್ಮ ಚಿತ್ರೀಕರಣ ವೆಚ್ಚದ ವ್ಯವಸ್ಥೆಗಾಗಿ ರೂ.14,35,182-00ನ್ನು ವೆಚ್ಚ ಮಾಡಲಾಗಿದೆ.

ಈ) ಇಲಾಖೆಯ ಸುಧಾರಣೆಗೆ ಸಂಬಂಧಪಟ್ಟಂತೆ ಡಿಪಿಎಆರ್ ಇಲಾಖೆಯ ತಪಾಸಣಾ ವರದಿಯು ರಾಷ್ಟ್ರ ಹಾಗೂ ರಾಜ್ಯ ಪತ್ರಾಗಾರ ನೀತಿಗೆ ಅನುಗುಣವಾಗಿಲ್ಲದೆ ಇರುವುದರಿಂದ ಇದನ್ನು ಅನುಷ್ಠಾನಗೊಳಿಸಿರುವುದಿಲ್ಲ. ಬದಲಾಗಿ ರಾಜ್ಯದ ದಾಖಲಾ ಸಂಪತ್ತನ್ನು ಮುಂದಿನ ಪೀಳಿಗೆಗಾಗಿ, ಸಮರ್ಪಕವಾಗಿ ಸಂಪರ್ಕಿಸಲು ಅನುಕೂಲವಾಗುವಂತೆ ಈಗಾಗಲೇ ಮೈಸೂರು

ಹಾಗೂ ಧಾರವಾಡದಲ್ಲಿ ಈಗಾಗಲೇ ಪತ್ರಾಗಾರ ಘಟಕವನ್ನು ಸ್ಥಾಪಿಸಿರುವಂತೆ ರಾಜ್ಯದ ಇತರ ಸ್ಥಳಗಳಲ್ಲೂ ಪತ್ರಾಗಾರ ಘಟಕಗಳನ್ನು ಹಂತ ಹಂತವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ಬಳ್ಳಾರಿ, ಶಿವಮೊಗ್ಗ ಮತ್ತು ಮಂಗಳೂರುಗಳಲ್ಲಿ ಪತ್ರಾಗಾರ ಘಟಕಗಳನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಒಳನಾಡು ಮೀನುಗಾರಿಕೆಗೆ ಒದಗಿಸಲಾದ ಸೌಲಭ್ಯಗಳು

1730 (2394) ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಮಾನ್ಯ ಮೀನುಗಾರಿಕೆ - ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಳನಾಡು ಮೀನುಗಾರಿಕೆಯನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಯಾವ ಯಾವ ಪ್ರದೇಶಗಳಲ್ಲಿ ಪ್ರೋತ್ಸಾಹಿಸಲಾಗಿದೆ;

ಆ) ಒಳನಾಡು ಮೀನು ವ್ಯವಸಾಯಗಾರರಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳೇನು?

ಶ್ರೀ ಬಿ.ರಮಾನಾಥ ರೈ, (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು).

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಕಾರ್ಕಳ ತಾಲ್ಲೂಕುಗಳಲ್ಲಿ ಹಾಗೂ ಮಂಗಳೂರು,ಉಡುಪಿ ಮತ್ತು ಕುಂದಾಪುರ ತಾಲೂಕಿನ ಒಳನಾಡು ಪ್ರದೇಶಗಳಲ್ಲಿ ಒಳನಾಡು ಮೀನುಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತಿದೆ.

ಆ) ಒಳನಾಡು ಪ್ರದೇಶಗಳಲ್ಲಿ ಮೀನು ಕೃಷಿಕೊಳ ನಿರ್ಮಾಣಕ್ಕೆ ಸಹಾಯಧನ, ಸಲಕರಣೆಕೊಳ್ಳಲು ಸಹಾಯಧನ ಕೆರೆಕೊಳಗಳಲ್ಲಿ, ಸಿಹಿನೀರು ಮೀನು ಮತ್ತು ಸಿಗಡಿ ವ್ಯವಸಾಯಕ್ಕೆ ಪ್ರೋತ್ಸಾಹ, ಬಾವಿ, ಹೊಂಡಗಳಲ್ಲಿ ಮೀನು ಕೃಷಿಗೆ ಸಹಾಯಧನಗಳನ್ನು ನೀಡಲಾಗುತ್ತಿದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿಯ ಪ್ರವಾಸಿ ಕೇಂದ್ರಗಳು

1731 (2395) ಶ್ರೀ ಕೆ.ಪ್ರಭಾಕರ ಬಂಗೇರ (ಬೆಳ್ತಂಗಡಿ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ನರಸಿಂಹಗಡ, ಧರ್ಮಸ್ಥಳ ಹಾಗೂ ಶಿಶಿಲ (ಮತ್ಸ್ಯಧಾಮ) ಗಳನ್ನು ಸರ್ಕಾರವು ಪ್ರವಾಸಿ ಕೇಂದ್ರಗಳು ಎಂದು ಘೋಷಿಸಿದೆಯೆ ಇಲ್ಲವಾದಲ್ಲಿ ಆ ಕುರಿತು ಇರುವ ಕಾರಣಗಳೇನು;

ಆ) ಈ ಮೂರು ಕೇಂದ್ರಗಳು ಅತ್ಯಂತ ಪ್ರಸಿದ್ಧ ಕ್ಷೇತ್ರಗಳಾಗಿದ್ದು ಅವುಗಳನ್ನು ಪ್ರವಾಸಿ ಕೇಂದ್ರವೆಂದು ಘೋಷಿಸಿ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರವು ಕ್ರಮ ಜರುಗಿಸುವುದೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು).